# ಪತ್ರಿಕಾ ತುಣುಕುಗಳು
# PAPER CLIPPINGS

ಇಲಾಖೆ / ವಿಷಯ : DEPARTMENT / SUBJECT: ಕರ್ನಾಟಕ ವಿಧಾನ ಸಭೆ ಸಚಿವಾಲಯ

ಪತ್ರಿಕೆಯ ಹೆಸರು : NAME OF THE NEWS PAPER: ಉದಯಕಾಲ

ದಿನಾಂಕ : DATE : 18/09/2019

## 17 ಶಾಸಕರು ರಾಜೀನಾಮೆ: ಚುನಾವಣಾ ಆಯೋಗಕ್ಕೆ ಪತ್ರ

ಉ.ಕಾ. 18/9/19

**ಬೆಂಗಳೂರು:** ರಾಜ್ಯದಲ್ಲಿ 17 ಶಾಸಕರು ರಾಜೀನಾಮೆ ಸಲ್ಲಿಸಿರುವುದರಿಂದ ಖಾಲಿಯಾಗಿರುವ ಕ್ಷೇತ್ರಗಳಿಗೆ ಚುನಾವಣೆ ನಡೆಸುವಂತೆ ವಿಧಾನಸಭೆ ಕಾರ್ಯದರ್ಶಿ ಚುನಾವಣಾ ಆಯೋಗಕ್ಕೆ ಪತ್ರ ಬರೆದಿದ್ದಾರೆ. ರಾಜ್ಯ ವಿಧಾನಸಭೆಯ 17 ಶಾಸಕರು ಜುಲೈ 25ಕ್ಕೆ ಅನರ್ಹಗೊಂಡಿದ್ದು ಮುಂದಿನ ಜನವರಿ 25ರೊಳಗೆ ಖಾಲಿ ಇರುವ ಕ್ಷೇತ್ರಗಳಿಗೆ ಚುನಾವಣೆ ನಡೆಸಬೇಕು. ಈ ಕ್ಷೇತ್ರಗಳಿಗೆ ಚುನಾವಣಾ ಪ್ರಕ್ರಿಯೆ ನಡೆಸಲು ವಿಧಾನಸಭೆಯಿಂದ ಸಲಹಾ ಪತ್ರ ಕಳುಹಿಸಲಾಗಿದೆ. ಈ ಹಿಂದೆ ಸ್ಪೀಕರ್ ಆದೇಶ ಸಮೇತ ಗೆಜೆಟ್ ಚುನಾವಣಾ ಆಯೋಗಕ್ಕೆ 17 ಕ್ಷೇತ್ರಗಳು ಖಾಲಿಯಾಗಿರುವ ಬಗ್ಗೆ ಅಧಿಸೂಚನೆ ಹೊರಡಿಸಿರುವ ಮಾಹಿತಿಯನ್ನು ಆಯೋಗಕ್ಕೆ ಕಳುಹಿಸಿಕೊಟ್ಟಿದ್ದರು. ಇದು ನಿರಂತರ ಪ್ರಕ್ರಿಯೆ ಇದರಲ್ಲಿ ಅಂತಹ ವಿಶೇಷತೆ ಏನಿಲ್ಲ ಎಂದು ವಿಧಾನಸಭಾ ಸಚಿವಾಲಯದ ಮೂಲಗಳು ತಿಳಿಸಿವೆ.